ಯಾಕೆ, ಈವರೆಗೆ ಬ್ರಹ್ಮಚಾರಿಯುಳಿದಿದ್ದಾನೆ? ಅಥವಾ ಇನ್ನೆಷ್ಟು ಕಾಲ ಹೀಗೇ ಇರಬೇಕೆಂದುಕೊಂಡಿದ್ದಾನೆ? ನಿಜ ಹೇಳುತ್ತೇನೆ... ಅಲೇಕ್ಸ್ಯ, ನನ್ನನ್ನೆಷ್ಟೇ ಪರಾಂಬರಿಸುವ ಸ್ನೇಹಿತನಾಗಿದ್ದರೂ, ಅವನನ್ನು ನಾನೆಂದೂ ಈ ಕುರಿತು ಕೇಳಿಲ್ಲ. ಯಾವೊತ್ತೂ ಕೇಳಬೇಕೆನಿಸಿಯೂ ಇಲ್ಲ. ಮಹಾನಗರದ 'ನಾಗರಿಕತೆ'ಯು, ಯಾರಿಗಾದರೂ ಕಲಿಸುವ ಮೊದಲ ಪಾಠವೆಂದರೆ ಇನ್ನೊಬ್ಬರ ವಿಷಯದಲ್ಲಿ ಮೂಗು ತೂರಿಸದೆ ಇರಬೇಕೆನ್ನುವುದು! ನನ್ನ ಮಟ್ಟಿಗಂತೂ, ಇದು ಹುಟ್ಟಿನೊಟ್ಟಿಗೇ ಬೆಸೆದುಕೊಂಡಿರುವ ಗುಣ! ಒಂದೆರಡು ಸರ್ತಿ, ಅಲೇಕ್ಸ್ಯ, ತನ್ನ ಮದುವೆಯ ಕುರಿತಾಗಿ ಸೂಚ್ಯವಾಗಿ ಆಡಿದ್ದಿದೆ. ಅದೂ ಪ್ರಾಸಂಗಿಕವಾಗಿ. 'ಸುಮೋದ್... ನನಗೇನು ಹಿಂದಿದೆಯೆ ಇಲ್ಲಾ ಮುಂದಿದೆಯಾ? ನಲವತ್ತಾರು ಆಗುತಾ ಬಂತು... ಈಗ ಮದುವೆ ಮಾಡಿಕೊಳ್ಳೋದಾ? ಎಲ್ಲವೂ ಆಗಬೇಕಾದ ಹೊತ್ತಿನಲ್ಲಿ ಆದರೆ ಮಾತ್ರ ಅದಕ್ಕೆ ಬೆಲೆ ಅಲ್ಲವಾ?' ಅಂದಿದ್ದ. 'ವೆಲ್... ಇಟ್ಸ್ ಯುವರ್ ಚಾಯ್ಸ್. ಇದು ನಿನ್ನ ಆಯ್ಕೆ ಅಷ್ಟೆ...' ಎಂದು ನಾನೂ ಮಾತು ಮೊಟುಕಿದ್ದೆ. 'ನೀನು ಹೇಗೇ ಇದ್ದರೂ ನೀನು ನನಗೊಬ್ಬ ಒಳ್ಳೇ ಸ್ನೇಹಿತ ತಿಳೀತಾ?' ಅಂದಿದ್ದೆ.

ಕಡೆಯದಾಗಿ, ಬೆಂಗಳೂರಿನಂತಹ ಮೆಟ್ರೋ ಶಹರದಲ್ಲಿ ಯಾರೊಬ್ಬರೂ ಇನ್ನೊಬ್ಬರನ್ನು ಚೆನ್ನಾಗಿ ಕಂಡರಿತಿದ್ದಾರೆಂಬುದೂ ಸೋಗು ತಾನೆ? ಆಗೊಮ್ಮೆ ಈಗೊಮ್ಮೆ, ಫೋನಿನಲ್ಲಿ ಮತ್ತು ಅಷ್ಟೇ ಆಗೀಗ ಎದುರುಸಿಕ್ಕು ಮಾತನಾಡಿದ ಮಾತ್ರಕ್ಕೆ, ಇನ್ನೊಬ್ಬರ ಪರಮಾತಿ ಪರಮ ಆತ್ಮಸ್ಥ ಸತ್ಯಗಳು ಗೊತ್ತಿರುತ್ತವೆಂಬುದಕ್ಕೆ ಪುರಾವೆಯಿದೆಯೆ? ಮದುವೆಯಾಗಿ ಒಡನಿರುವ ಯಾರೇ ಇಬ್ಬರೂ ಪರಸ್ಪರವೆಲ್ಲವನ್ನೂ ಕಂಡರಿತಿರುತ್ತಾರೆಂಬುದನ್ನಾದರೂ ಸಾಬೀತು ಮಾಡಲುಂಟೆ? ಭ್ರಾಂತು ತಾನೆ?!

ಇದೇ ಮಾತುಕತೆಯ ನಡುವೆ, ಮಧುಕರಿ, ಐಕ್ಯಾಳ ಕುರಿತಾಗಿ ನನಗೆ ಹೊಳೆದಿರದ ಸತ್ಯವೊಂದನ್ನು ಹೊರಗೆಡಹಿದ್ದ. ಭುವಿಯನ್ನೂ ಬಾನನ್ನೂ ಉಲ್ಟಾಗೈದಿರಿಸಿದ ಮಾತದು! 'ಮೋದ್, ನೀನಿದನ್ನ ಗಮನಿಸಿದೀಯಾ? ನಿನ್ನ ಮಗಳಲ್ಲಿ ನನಗೊಂದು ಪ್ಯಾಟರ್ನ್ ಕಾಣಿಸುತಾ ಇದೆ... ಐ ಮೀನ್ ಇನ್ ಹರ್ ರಿಲೇಷನ್ಷಿಪ್ಸ್...' ಎಂದು ಪೀಠಿಕೆಯಿಟ್ಟು, 'ಅವಳು ಕಾಲೇಜಿನಲ್ಲಿರೋವಾಗ ತನ್ನ ಪ್ರೊಫೆಸರೊಬ್ಬನಿಗೆ ಮನಸ್ಸು ಕೊಟ್ಟಿದ್ದಳಲ್ಲವಾ... ಆಮೇಲೆ, ಆಫೀಸಿನಲ್ಲಿ ತನ್ನ ಬಾಸು. ಆನಂತರ ಈ ಅಲೇಕ್ಸ್ಯ... ಇವನ್ನೆಲ್ಲ ತಳಕು ಹಾಕಿಕೊಂಡೊಮ್ಮೆ ನೋಡು... ಐ ಥಿಂಕ್ ಶಿ ಫೀಲ್ಸ್ ಮೋರ್ ಕಮ್ಫರ್ಟಬಲ್ ವಿತ್ ಮೆಚೂರ್ ಮೆನ್... ಅವಳಿಗೆ ತನ್ನ ಅಪ್ಪನ ವಯಸ್ಸಿನ ಗಂಡಸರನ್ನು ಕಾಮಿಸೋದರಲ್ಲಿ ಏನೋ ಖುಷಿ ಇದೆ ಅನಿಸುತ್ತೆ... ಅವರೊಡನೆ ತಾನು ಹೆಚ್ಚು ಸುಖಿಯೂ, ಸುರಕ್ಷಿತವೂ ಇರಬಲ್ಲೆ ಅನಿಸುತ್ತೆ ಅಂತ ಕಾಣುತ್ತೆ...' ಎಂದೆಲ್ಲ ವಿಸ್ತರಿಸಿ ಹೇಳಿದ್ದ. ಅವನು ಹೀಗೆ ಹೇಳುವಾಗ ನಾನು ತಳೆದ ಆಘಾತಕಾರೀ ಅವಾಕ್ಕು, ಈವರೆಗೂ ನನ್ನಲ್ಲಿ ಒಳಮಿಕ್ಕಿದೆ. ಈಗಲೂ ಆಗೊಮ್ಮೆ ಈಗೊಮ್ಮೆ ಕಾಡುವುದಿದೆ. 'ಮಧೂ... ಇದೆಲ್ಲ ನಿನ್ನ ವಿಶ್ಲೇಷಣೆಯೋ... ಇಲ್ಲಾ, ನಿನ್ನ ಮಗಳೇ ನಿನ್ನಲ್ಲಿ ಹೇಳಿಕೊಂಡಿದ್ದೋ...' ಎಂದು ಕೇಳುವಾಗ, ಮಧುಕರಿ, ತಾನೇ ಮಾಡಿಕೊಂಡ ಲೆಕ್ಕಾಚಾರವೆಂದು ಹೇಳಿದನಾಗಿ ಯಾಕೋ ಏನೋ, ನನ್ನ ಮನಸ್ಸು ನಿರಾಳಗೊಂಡಿತ್ತು. 'ಮಧೂ, ಕಮ್ಮಾಫಿಟ್ಟ್... ನೀನೊಬ್ಬ ಆರ್ಕಿಟೆಕ್ಟು. ಸಿಗ್ಮಂಡ್ ಫ್ರಾಯ್ಡ್ ಅಲ್ಲ...' ಅಂತಂದು ಲೇವಡಿ ಮಾಡಿದ್ದೆನಾದರೂ, ಸದರಿ ಸತ್ಯವು ನನ್ನನ್ನು ಬಲುಕಾಲಕ್ಕು ಕಾಡಿತ್ತು. ಈಗಲೂ ಕಾಡುವುದಿದೆ.

★★★